ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ನಾನು ಮೂರು ದಿವಸದಿಂದಲೂ ಕೇಳುತ್ತಿದ್ದೇನೆ. 7ನೇ ತಾರೀಖು ಕೊಟ್ಟಿದ್ದೇನೆ. ತಾವು latest ಆಗಿರುವ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುತ್ತಿಲ್ಲವೆಂದು ಮಾನ್ಯ ಶಿವಲಿಂಗೇಗೌಡರು ಹೇಳುತ್ತಿದ್ದಾರೆ. 3-4 ವರ್ಷದ ಬಗ್ಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತಿದ್ದೀರಿ.

ಅಧ್ಯಕ್ಷರು : ನಾನು ಆ stand ಅನ್ನು ತೆಗೆದುಕೊಂಡು ಬಿಟ್ಟರೆ ತೊಂದರೆಯಾಗುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ : ನಾನು ತಾವು ಹೇಳುವುದಕ್ಕೆ ಬದ್ಧನಾಗಿದ್ದೇನೆ.

ಅಧ್ಯಕ್ಷರು : ನಾನು ಉಳಿದಂತಹ ಎಲ್ಲಾ ಸ್ನೇಹಿತರುಗಳಿಗೆ accommodate ಮಾಡುವ ಹಾಗೆ ಮಾಡುತ್ತಿದ್ದೇನೆ. ನೀವು ಹೇಳುವ principles ಅನ್ನು apply ಮಾಡಿಬಿಟ್ಟರೆ ಬಹಳಷ್ಟು ಬರುವುದೇ ಇಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ದಿನಾಂಕ: 5ನೇ ತಾರೀಖು ಬಂದಂತಹ ಇದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. "ದೇವರಿಗೆ ಕರೆಂಟ್ ಇಲ್ಲ, ಅರ್ಚಕರಿಗೆ ವೇತನ ಕಟ್". ಒಂದು ವರ್ಷದಿಂದ ಅರ್ಚಕರಿಗೆ ವೇತನವು ಇಲ್ಲ, ದೇವರಿಗೆ current ಇಲ್ಲ.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ತಾವು ಕೇಳಿರುವುದು ಇದಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ನಾನು ಮೊನ್ನೆ ದಿನ 7ನೇ ತಾರೀಖಿನ ದಿವಸ ಕೊಟ್ಟಿದ್ದೇನೆ, ಸ್ವಾಮಿ.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ತಾವು ಇದನ್ನು ಕೇಳುತ್ತೀರೋ ಅಥವಾ ಇಲ್ಲವೇ?

ಶ್ರೀ ಹೆಚ್.ಡಿ.ರೇವಣ್ಣ : ಯಾವುದು, ಸರ್?

ಅಧ್ಯಕ್ಷರು : ಚಿಕ್ಕನಾಯಕನಹಳ್ಳಿಯಿಂದ ತಿಪಟೂರು ಮುಖ್ಯರಸ್ತೆಯಿಂದ, ಅದರ ಬಗ್ಗೆ ತಾವು ಕೇಳಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಅದನ್ನು ಕೇಳುತ್ತಿದ್ದೇನೆ.

12) ವಿಷಯ : ರಸ್ತೆ ದುರಸ್ತಿ ಬಗ್ಗೆ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ) : ಮಾನ್ಯ ಸಭಾಧ್ಯಕ್ಷರೆ, ಚಿಕ್ಕನಾಯಕನಹಳ್ಳಿ, ತಿಪಟೂರು ಮತ್ತು ಹಾಸನ ರಸ್ತೆಯನ್ನು ಸುಮಾರು 238

ಕೋಟಿ ರೂಪಾಯಿಗಳಿಗೆ 2006ರಲ್ಲಿ ಇದು ಅಪ್ರೂವಲ್ ಆಗಿತ್ತು. ಇದಕ್ಕೆ ದಿನಾಂಕ:23.11.2006ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ಕೊಟ್ಟಿದ್ದರು. ಸುಮಾರು 7 ವರ್ಷಗಳು ಆದರೂ ಕೂಡ ಅದು ಚಿಕ್ಕನಾಯಕನಹಳ್ಳಿ ಶ್ರೀ ಸಿ.ಬಿ.ಸುರೇಶ್ ಬಾಬುರವರಿಗೆ ಬರುತ್ತದೆ. ಅರಸೀಕೆರೆ ಮಾನ್ಯ ಸದಸ್ಯರಾದ ಶ್ರೀ ಕೆ.ಎಂ.ಶಿವಲಿಂಗೇಗೌಡರಿಗೆ ಬರುತ್ತದೆ. ಅಲ್ಲಿ ಸುಮಾರು 7 ವರ್ಷದಿಂದ ಜನರು ಹೋಗುವುದನ್ನು ನೋಡಿದರೆ ಅಲ್ಲಿ ಯಾರಾದರೂ ಹೆರಿಗೆಗೆ ಹೋದರೆ ಹೆರಿಗೆ ಆಸ್ಪತ್ರೆಗೆ ಹೋಗುವುದು ಬೇಕಾಗಿಲ್ಲ. ಆ ರಸ್ತೆಯ ಪರಿಸ್ಥಿತಿ ಆ ರೀತಿ ಇದೆ. ಆ ರಸ್ತೆಯ ಬಗ್ಗೆ ಯಾರೋ ಕಂಟ್ರ್ಯಾಕ್ಟರ್ ತೆಗೆದುಕೊಂಡು ನೀವು ಬರುವಾಗ ತುಮಕೂರು ಜಿಲ್ಲೆಯ ಆ ರಸ್ತೆಯ ಕಡೆಗೆ ಬಂದುಬಿಡಿ ನಿಮಗೆ ಗೊತ್ತಾಗುತ್ತದೆ. ಅಲ್ಲಿ ಯಾರೋ ಹೈದರಾಬಾದ್‌ನ ಕಂಟ್ರ್ಯಾಕ್ಟರ್‌ದಾರನು ಆ ರಸ್ತೆಯ ರಿಪೇರಿ ಮಾಡುವ ಬಗ್ಗೆ ಸುಮಾರು 2008ರಲ್ಲಿ ತೆಗೆದುಕೊಂಡು ಅವನು ಎಲ್ಲಾ ಕಡೆಯಲ್ಲಿ ರೋಡ್ ಅನ್ನು ಕಿತ್ತು ಹಾಕಿಬಿಟ್ಟಿದ್ದಾನೆ. ಆ ರಸ್ತೆಯಲ್ಲಿ ಜನರು ಬರುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀ ಕೆ.ಎಂ.ಶಿವಲಿಂಗೇಗೌಡರು ಹಾಗೂ ಸುಮಾರು 2000 ಜನ ಕಾರ್ಯಕರ್ತರು ಅಲ್ಲಿ ರಸ್ತೆ ತಡೆಯನ್ನೂ ಸಹ ಮಾಡಿದ್ದಾರೆ. ಆ ರಸ್ತೆಯ ಕಾಮಗಾರಿಯು 2014ರಲ್ಲಿ ಮುಗಿಯಬೇಕಾಗಿತ್ತು. 14.1.2012 ರಿಂದ ಪ್ರಾರಂಭವಾಗಿ 4.1.2014ಕ್ಕೆ ಅದು ಮುಗಿಯಬೇಕಾಗಿತ್ತು. ಇವತ್ತಿನವರೆಗೆ ಅಲ್ಲಿ ಸುಮಾರು 4 ಕಿ.ಮೀ. ರಸ್ತೆಯನ್ನೂ ಸಹ ಮಾಡಿರುವುದಿಲ್ಲ. ಅದು ಸುಮಾರು 250 ಕೋಟಿ ರೂಪಾಯಿಗಳ ಕೆಲಸವಾಗಿದೆ. ಗಣಿ ಲಾರಿಯು ಸುಮಾರು ಒಂದು ದಿವಸಕ್ಕೆ ಒಂದು ಸಾವಿರ ಗಣಿ ಲಾರಿ ಹೋಗುವಂತಹ ಪರಿಸ್ಥಿತಿ ಇತ್ತು. ಈಗ ಗಣಿ ಲಾರಿ ಹೋಗುತ್ತಿಲ್ಲ. ಅಲ್ಲಿ ಮೂರ್ತಿ ಎಲ್ಲಾ ರಸ್ತೆಗಳು ಹಾಳಾಗಿದೆ. ಇದಕ್ಕೆ ಉತ್ತರವೂ ಸಹ ಬಂದಿರುವುದಿಲ್ಲ. ದಯಮಾಡಿ ಇದರ ಬಗ್ಗೆ ಮಾನ್ಯ ಕಾನೂನು ಮಂತ್ರಿಗಳು ಹೇಳುತ್ತಾರೆ ದಯಮಾಡಿ ಆ ಕಂಟ್ರ್ಯಾಕ್ಟ್ ಅನ್ನು rescind ಮಾಡಿ, ಹೊಸದಾಗಿ ಆದರೂ ಸಹ ಟೆಂಡರ್ ಅನ್ನು ಕರೆಯಿರಿ. ಆ ರಸ್ತೆಯಲ್ಲಿ ಓಡಾಡುವುದಕ್ಕಾದರೂ ಸಹ ಗುಂಡಿಯನ್ನು ಮುಚ್ಚುವುದಕ್ಕಾದರೂ ಸಹ ನಿಮ್ಮ ಇಲಾಖೆಯ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಬೇಕೆಂದು ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರು ಪ್ರಸ್ತಾಪ

ಮಾಡಿರುವಂತಹ ರಸ್ತೆಯ ಬಗ್ಗೆ ಅದು ನನ್ನ ಶಿರಾ via ಮಧುಗಿರಿಯವರೆಗೂ ಕೂಡ ಸೇರುತ್ತದೆ. ಅದು ಮೂರು ಪ್ಯಾಕೇಜಾಗಿದೆ. ಅವರು ಹೇಳುತ್ತಿರುವುದು ವಾಸ್ತವಿಕವಾಗಿ ಸತ್ಯ ಇದೆ. ತಾವು ಹೇಳಿರುವುದನ್ನು ನಾನು ಒಪ್ಪಿಕೊಂಡಿದ್ದೇನೆ. ಮಾನ್ಯ ಶಿವಲಿಂಗೇಗೌಡರೆ, ನಿನ್ನೆ ದಿವಸ ಮಾತನಾಡಿದ್ದೇನೆ. ಆ ರಸ್ತೆಗಳು ಅರ್ಧಂಬರ್ಧ ಆಗಿಹೋಗಿದೆ. ಅದು ರಾಷ್ಟ್ರೀಯ ಹೆದ್ದಾರಿಯಾಗಿದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಇದು ರಾಷ್ಟ್ರೀಯ ಹೆದ್ದಾರಿಯಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಇದು, ಅದು ಅಲ್ಲ ಸರ್. ಅದು ಟೋಲ್ ಕಲೆಕ್ಟ್ ಮಾಡಿ ಮಾಡುತ್ತಿರುವಂತಹ ರಸ್ತೆಯಾಗಿದೆ. ಅಲ್ಲಿ ಗಣಿ ಲಾರಿಗಳು ಓಡಾಡುತ್ತಿದ್ದವಲ್ಲಾ ಅದಕ್ಕಾಗಿ ಅಲ್ಲಿ ಟೋಲ್ ಕಲೆಕ್ಟ್ ಮಾಡುತ್ತಿದ್ದರು.

ಶ್ರೀ ಟಿ.ಬಿ.ಜಯಚಂದ್ರ: ಇದಕ್ಕೆ ನಾನು ಉತ್ತರವನ್ನು ಕೊಡಿಸಿಕೊಡುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಈ ಬಗ್ಗೆ PWD ಮಂತ್ರಿಗಳಿಂದ ಉತ್ತರವನ್ನು ಕೊಡಿಸಬೇಕು.

ಶ್ರೀ ಟಿ.ಬಿ.ಜಯಚಂದ್ರ : ಅವರಿಂದಲೇ ಕೊಡಿಸುತ್ತೇನೆ.

ಅಧ್ಯಕ್ಷರು : ಆಯಿತು.

13) ವಿಷಯ : ಯೋಧನ ಕುಟುಂಬಕ್ಕೆ ಪರಿಹಾರ ಧನವನ್ನು ಕೊಡುವ ಬಗ್ಗೆ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ): ಇವತ್ತು ಈ ದೇಶದಲ್ಲಿ ಸೈನಿಕರು ಜಮ್ಮು ಮತ್ತು ಕಾಶ್ಮೀರದ ಗಡಿಭಾಗದಲ್ಲಿ ನಮ್ಮ ಜಿಲ್ಲೆಯವರು ಚನ್ನರಾಯಪಟ್ಟಣ ತಾಲ್ಲೂಕು ಅಗ್ರಹಾರಕ್ಕೆ ಬರುವಂತಹ ಒಬ್ಬ ಯೋಧ ಶ್ರೀ ಯೋಗಾನಂದ ಎಂಬ ಸೈನಿಕನು ಅಲ್ಲಿ ಮೈನಸ್ 25 ಡಿಗ್ರಿ ಚಳಿಯನ್ನು ತಡೆಯುವುದಕ್ಕೆ ಆಗದೇ ಅಸು ನೀಗಿದ್ದಾನೆ. ಅವನು ಸುಮಾರು 5–6 ಕಡೆಗಳಲ್ಲಿ ನಾಸಿಕ್, ಜಮ್ಮುನಲ್ಲಿ, ಕಾಶ್ಮೀರದಲ್ಲಿ, ಸೈನಿಕನಾಗಿ ಸುಮಾರು 18 ವರ್ಷಗಳ ಕಾಲ ಸೇವೆಯನ್ನು ಮಾಡಿದ್ದಾನೆ. ಈಗ ಅವನಿಗೆ ರಾಜ್ಯ ಸರ್ಕಾರದಿಂದ ಒಂದು ಲಕ್ಷ ರೂಪಾಯಿಯನ್ನು ಕೊಡಬೇಕು. ಯಾರೋ ಒಬ್ಬ ಯೋಧನು ಸತ್ತುಹೋದರೆ ಆತನ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಇವತ್ತೂ ಸಹ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಹಣವಿಲ್ಲವೆಂದು ಹೇಳುತ್ತಿದ್ದಾರೆ. ಇನ್ನೊಬ್ಬ ಯೋಧ ಮಾಜಿ ಪ್ರಧಾನ ಮಂತ್ರಿ ಊರಿನಲ್ಲಿ ಸತ್ತು